International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

# ಸುರೇಂದ್ರಕುಮಾರ ಕೆರಮಗಿ : ಕಾದಂಬರಿಕಾರರು

**ಡಾ.ಶಿವಯ್ಯ**

ಸಹ ಪ್ರಾಧ್ಯಾಪಕರು ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು

ಡಾ ಸುರೇಂದ್ರಕುಮಾರ ಕೆರಮಗಿಯವರ ಹೈದ್ರಾಬಾದ್ ಕರ್ನಾಟಕದ ಪ್ರಮುಖ ಕಾದಂಬರಿಕಾರರು ಇದೊಂದು ಸಂಶೋಧನಾ ಕೃತಿಯಿದ್ದಂತೆ. ಕಲ್ಯಾಣ ಕರ್ನಾಟಕ ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ಅನಾದಿ ಕಾಲದಿಂದಲೂ ನೀಡುತ್ತಾ ಬಂದಿದೆ. ಶ್ರೀವಿಜಯನಿಂದಿಡಿದು ಇಂದಿನ ಕಾಲದ ವಿಕ್ರಮ ವಿಸಾಜಿ, ಚಿದಾನಂದ ಸಾಲಿ, ಶರಣಮ್ಮ ಪಾಟೀಲರಂತಹ ಸಾಹಿತಗಳು ಕಲ್ಯಾಣ ಕರ್ನಾಕಟ ಸಾಹಿತ್ಯದ ಪರಂಪರೆಯನ್ನು ಮುಂದುವರಿಸಿದ್ದಾರೆ. ಶ್ರೀವಿಜಯ, ಶರಣರು, ದಾಸರು, ಅನುಭಾವಿಗಳು(ತತ್ವಪದಕಾರರು), ನವೋದಯ, ಪ್ರಗತಿಶೀಲ, ನವ್ಯ, ದಲಿತ – ಬಂಡಾಯ, ಆಧುನಿಕೋತ್ತರವಾದಂತಹ ಸಾಹಿತ್ಯದ ಬಗೆಗಳಲ್ಲಿ ತನ್ನದೇ ಆದ ಛಾಪು ಮೂಡಿಸಿದ ಶ್ರೇಯಸ್ಸು ಕಲ್ಯಾಣ ಕರ್ನಾಟಕಕ್ಕೆ ಸಲ್ಲುತ್ತದೆ. ಈ ಭಾಗದಿಂದ ಅನೇಕ ಕಾವ್ಯಕಾರರು, ಕಥೆಗಾರರು, ಕಾದಂಬರಿಕಾರರು, ಸಂಶೋಧಕರು ಆಗಿಹೋಗಿದ್ದಾರೆ.

ಡಾ ಸುರೇಂದ್ರಕುಮಾರ ಕೆರಮಗಿಯವರ ಹೈದ್ರಾಬಾದ್ ಕರ್ನಾಟಕದ ಪ್ರಮುಖ ಕಾದಂಬರಿಕಾರರು ಎಂಬ ಕೃತಿ, ಹೈದ್ರಾಬಾದ್ ಕರ್ನಾಟಕದ ಕಾದಂಬರಿ ಸಾಹಿತ್ಯ ಚರಿತ್ರೆಯಾಗಿದೆ. ಬೀದರ್, ಕಲಬುರಗಿ, ಯಾದಗಿರ, ರಾಯಚೂರು, ಕೊಪ್ಪಳ, ಬಳ್ಳಾರಿ ವಿಜಯನಗರ ಜಿಲ್ಲೆಯ ಕಾದಂಬರಿಕಾರರ ಚರಿತ್ರೆಯನ್ನು ಅಚ್ಚುಕಟ್ಟಾಗಿ ಕಟ್ಟಿದ್ದಾರೆ. ಲೇಖಕರು ಅವಿಭಜಿತ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಬಳ್ಳಾರಿ ಮೊದಲು ಈ ನಾಲ್ಕು ಜಿಲ್ಲೆಗಳಿದ್ದವು, ವಿಭಜಿತವಾದಾಗ ಕೊಪ್ಪಳ, ಯಾದಗಿರ, ವಿಜಯನಗರ ಸೇರಿ ಏಳು ಜಿಲ್ಲೆಗಳಾಗಿವೆ. ರಾಯಚೂರು ಜಿಲ್ಲೆಯಿಂದ 09 ಜನ, ಕಲಬುರಗಿ ಜಿಲ್ಲೆಯಿಂದ 15, ಬಳ್ಳಾರಿ ಜಿಲ್ಲೆಯಿಂದ 02, ಬೀದರ್ ಜಿಲ್ಲೆಯಿಂದ 06, ಯಾದಗಿರಿ ಜಿಲ್ಲೆಯಿಂದ 03 ಒಟ್ಟು 35 ಕಾದಂಬರಿಕಾರ ವಿವರಗಳನ್ನು ನೀಡಿದ್ದಾರೆ.

ಕಲ್ಯಾಣ ಕರ್ನಾಟಕ ಕಾದಂಬರಿ ಸಾಹಿತ್ಯಕ್ಕೆ ತನ್ನದೇ ಕೊಡುಗೆಯನ್ನು ಇಂದಿಗೂ ನೀಡುತ್ತಾ ಬಂದಿದೆ. ಇಲ್ಲಿಯ ಭಾಷೆ, ದೇಶಿ ಸೊಗುಡು, ಜನಸಾಮಾನ್ಯರ ಬದುಕಿನ ಕಷ್ಟ–ನಷ್ಟ, ದಬ್ಬಾಳಿಕೆ, ಶೋಷಣೆ, ನಿಜಾಮರ ದುಷ್ಕೃತ್ಯ, ಇಲ್ಲಿಯ ಕಲೆ ಸಂಗೀತ ಮುಂತಾದ ವಿಷಯಗಳನ್ನು ಈ ಭಾಗದ ಕಾದಂಬರಿಕಾರು ಮನಮುಟ್ಟುವಂತೆ ಕಟ್ಟಿಕೊಡುತ್ತಾರೆ. ಸ್ತ್ರೀ ಸಂವೇದನೆಗಳು ಅವರ ಬದುಕಿನ ಮಜಲುಗಳು ಇಲ್ಲಿಯ ಕಾದಂಬರಿಯ ಇನ್ನೊಂದು ಮುಖವಾಗಿದೆ. ಚರಿತ್ರೆ, ಸಾಮಾಜಿಕ, ಪೌರಾಣಿಕ ವಿಷಯಾಧರಿತ ಕಾದಂಬರಿಗಳು ಇಲ್ಲಿ ಮೂಡಿಬಂದಿವೆ.

ರಾಯಚೂರು ಜಿಲ್ಲೆಯ ಸಿದ್ಧಯ್ಯ ಪುರಣಿಕ, ಜಯತೀರ್ಥ ರಾಜ ಪುರೋಹಿತ, ಶಾಂತರಸ, ಜಂಬಣ್ಣ ಅಮರಚಿಂತ, ರಾಜಾ ಸಾಹೇಬ ಮಾಳೇಕೊಪ್ಪ, ಎಂ ಜೀವನ ಮಾಳೇಕೊಪ್ಪ, ರಾಜಶೇಖರ ನೀರಮಾನ್ವಿ, ದೇವೇಂದ್ರಕುಮಾರ ಹಕಾರೆ, ಸಿದ್ಧಪ್ಪ, ಪಂಚಾಕ್ಷರಿ ಹಿರೇಮಠ, ಮಲಕಯ್ಯ, ಮಲ್ಲಿಕಾರ್ಜುನ ಹಿರೇಮಠ, ಗವೀಶ ಹಿರೇಮಠ, ಅಮರೇಶ ನುಗಡೋಣಿ, ಡಾ ಬಸವಪ್ರಭು ಪಾಟೀಲ, ಚಿದಾನಂದ ಸಾಲಿ, ಡಾ ರಾಜಶೇಖರ ಹಳೆಮನೆ, ಕೊಟ್ನೆಕಲ್ ವೆಂಕೋಬ, ಎಚ್ ಜಿ ರಾಧದೇವಿ ಮುಂತಾದವರು ಕಾದಂಬರಿ ರಚಿಸಿ ಕನ್ನಡ ಕಾದಂಬರಿ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಕಾದಂಬರಿಕಾರರ ಕಾದಂಬರಿಯ ವಸ್ತು ವಿಷಯ ಸಂಕೀರ್ಣತೆಯಿಂದ ಕೂಡಿದೆ. ಕನ್ನಡ ಹಿಂದಿ ಉರ್ದು ಬಾಷೆಗಳಲ್ಲಿ ಪ್ರಾವಿಣ್ಯ ಪಡೆದ ಕಾದಂಬರಿಕಾರರು ವಿಭಿನ್ನವಾಗಿ ರಚಿಸಿದ್ದಾರೆ. ಸ್ವಾತಂತ್ರ್ಯ ಹೋರಾಟ, ನಿಜಾಮ ಶಾಯಿಯ ಆಡಳಿತ, ರೀತಿ, ನೀತಿ, ಕ್ರೌರ್ಯ, ದಬ್ಬಾಳಿಕೆ ಬ್ರಿಟಿಷ್ರ ವಿರುದ್ಧದ ಹೋರಾಟ, ಹಳ್ಳಿಗಳಲ್ಲಿಯ ಗೌಡ–ಕುಲಕರ್ಣಿಗಳ ಆಟ ಮೇಲಾಟ, ಕೃಷಿ, ಕ್ರೀಡೆ, ಲೈಂಗಿಕತೆ, ಜಾತಿಯತೆ, ಹಿಂಸೆ, ಬರಗಾಲದ ಬವಣೆ, ವರ್ಗ, ವರ್ಣ, ಅಧಿಕಾರ, ದೌರ್ಜನ್ಯ, ಅನ್ಯಾಯ, ಮೋಸ–ವಂಚನೆ, ಹಳ್ಳಿಯ ಪರಿಸರ, ದಲಿತರ ಬದುಕು, ಅನಕ್ಷರಸ್ಥರ ಮೇಲೆ ನಡೆಯುವ ಶೋಷಣೆ, ದೇವರು ಧರ್ಮ, ಸಂಪ್ರದಾಯ, ನಿರ್ಗತಿಕರ, ಅಮಾಯಕರ ಬದುಕು ಬವಣೆ, ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಧಾರ್ಮಿಕ, ವೈಜ್ಞಾನಿಕ, ತರ್ಕ, ಆಲೋಚನೆ, ಜನರ ತಲ್ಲಣ–ತಳಮಳ, ಶಿಕ್ಷಣ, ಸಂಘಟನೆ, ಹೋರಾಟ ಇವುಗಳನ್ನು ಅಲ್ಲಿಯ ಆಡು ನುಡಿಯಲ್ಲಿ ತುಂಬಾ ಸೊಗಸಾಗಿ ಕಾದಂಬರಿಗಳಲ್ಲಿ ಹೆಣೆದಿದ್ದಾರೆ.

ಈ ಎಲ್ಲಾ ಅಂಶಗಳನ್ನು ಕಲಬುರಗಿ ಜಿಲ್ಲೆಯ ಈ ಕಾದಂಬರಿಕಾರರು ತಮ್ಮದೆ ಆದ ಶೈಲಿ, ತಂತ್ರಗಳನ್ನು ಬಳಸಿ ಬರೆದಿದ್ದಾರೆ. ಚಂದ್ರಕಾಂತ ಕುಸನೂರು, ಚನ್ನಣ್ಣ ವಾಲಿಕಾರ, ಜಿ. ಗೀತಾ ನಾಗಭೂಷಣ, ಆರ್.ಕೆ.ಹುಡುಗಿ, ಸ್ವಾಮಿರಾವ್ ಕುಲ್ಕರ್ಣಿ, ಕಲ್ಲಯ್ಯ ಆರ್ ಸ್ಥಾವರಮಠ, ಚಿತ್ರಶೇಖರ ಕಂಠಿ, ಕೃಷ್ಣಮೂರ್ತಿ ಕಿತ್ತೂರು, ಪ್ರಭಾಕರ ಜೋಶಿ, ಸರಿತಾ ಕುಮಾರ ದೇಸಾಯಿ, ಕಾವ್ಯಶ್ರೀ ಮಹಾಗಾಂವಕರ್, ಪ್ರಮಿಳಾ ಜಾನಪ್ಪಗೌಡ, ಶರಣಮ್ಮ ಪಾಟೀಲ ಮುಂತಾದ ಲೇಖಕರು ಉತ್ತಮವಾದ ಕಾದಂಬರಿಗಳನ್ನು ಸಾಹಿತ್ಯಕ್ಕೆ ಲೋಕಕ್ಕೆ ನೀಡಿದ್ದಾರೆ.

ಬಳ್ಳಾರಿ ಜಿಲ್ಲೆ ಕೂಡ ಕಾದಂಬರಿ ಸಾಹಿತ್ಯದಿಂದ ಹೊರತಾದುದಲ್ಲ. ಕನ್ನಡ ನಾಡಿನ ಅಪ್ರತಿಮ ಕಾದಂಬರಿಕಾರರಾದ ಕುಂ ವೀರಭದ್ರಪ್ಪ ಅವರು ಇದೆ ಜಿಲ್ಲೆಯವರು. ಗ್ರಾಮೀಣ ಸೋಗಡು, ಅಲ್ಲಿಯ ಭಾಷೆ, ಹಳ್ಳಿಗಳ ಚಿತ್ರಣ, ಶೋಷಣೆ, ಜಮಿನ್ದಾರಿಗಳ ಉಪಟಳ, ಬ್ರಿಟಿಷರ ವಿರುದ್ಧ ಹೋರಾಟದ ವಿಚಾರಗಳನ್ನು ತಮ್ಮ ಕಾದಂಬರಿಗಳಲ್ಲಿ ಅಚ್ಚೊತ್ತಿಸಿದ್ದಾರೆ. ಇನ್ನೊಬ್ಬ ಅಕ್ಷರ ರಾಕ್ಷಸ ಎಂದೇ ಖ್ಯಾತಿ ಪಡೆದ ಪ್ರತ್ರಿಕೋದ್ಯಮದ ದಿಗ್ಗಜ ರವಿ ಬೆಳಗೆರೆ ಹೊಸ ತಲೆಮಾರಿನ ಕಾದಂಬರಿ ಸಾಹಿತ್ಯಕ್ಕೆ ಮುನ್ನುಡಿ ಬರೆದವರು. ವಾಸ್ತವದ ವಿಚಾರಗಳನ್ನು ತಮ್ಮ ಕಾದಂಬರಿಗಳಲ್ಲಿ ಮನಮುಟ್ಟುವಂತೆ ಚಿತ್ರಸಿದ ಕೀರ್ತಿ ಬೆಳಗೆರೆಗೆ ಸಲ್ಲುತ್ತದೆ.

ಮಹಾರಾಷ್ಟ್ರಕ್ಕೆ ಅಂಟಿಕೊಂಡಿರುವ ಜಿಲ್ಲೆ ಬೀದರ, ಬಹು ಭಾಷೆಗಳ ಸಂಗಮವಿದ್ದಂತೆ, ಮರಾಠಿ, ಹಿಂದಿ, ತೆಲುಗು, ಕನ್ನಡ ಭಾಷೆಗಳು ಅಲ್ಲಿ ಜನಜನಿತ, ಯಶೋದಮ್ಮ ಸಿದ್ಬಟ್ಟೆ, ಎಂ.ಜಿ.ದೇಶಪಾಂಡೆ, ಸುಬ್ಬಣ್ಣ ಅಂಬೆಸಂಗೆ, ಡಾ ರಾಜೆಂದ್ರ ಯರನಾಳೆ, ಡಾ ಜಯದೇವಿ ಎಂ ಗಾಯಕವಾಡ, ಮಲ್ಲಮ್ಮ ಆರ್ ಪಾಟೀಲ ಈ ಎಲ್ಲಾ ಕಾದಂಬರಿ ಬರಹಗಾರರು ಆಧುನಿಕ ಸ್ಪರ್ಷದ ಜೊತೆಗೆ ಗತಕಾಲದ ಇತಿಹಾಸದ, ಪೌರಾಣಿಕ ವಿಚಾರಗಳೊಂದಿಗೆ ಕಾದಂಬರಿ ಕಟ್ಟವುದು ವಿಶೇಷವಾಗಿದೆ. ಡಾ ಜಯದೇವಿ ಎಂ ಗಾಯಕವಾಡ ಅವರು ಹೊಸತಲೆಮಾರಿನ ಬರವಸೆಯ ಕಾದಂಬರಿಕಾರರು, ಬೀದರಿನ ಕಲೆ, ಸಂಸ್ಕೃತಿ, ಸಮಾಜದ ತಾಕಲಾಟಗಳನ್ನು ಮುಖ್ಯವಾಗಿಟ್ಟುಕೊಂಡು ಕಾದಂಬರಿಗಳನ್ನು ರಚಿಸಿದ್ದಾರೆ.

ಯಾದಗಿರಿ ಜಿಲ್ಲೆ ಕನ್ನಡ ಕಾದಂಬರಿ ಸಾಹಿತ್ಯಕ್ಕೆ ಚಾರಿತ್ರಿಕ, ಸಾಮಾಜಿಕ, ಜೀವನ ಚರಿತ್ರೆ, ಅದರಲ್ಲೂ ಬರಹಗಾರರ ತಂದೆ ತಾಯಿಯ ಚರಿತ್ರೆಯನ್ನು ಕಾದಂಬರಿ ರೂಪದಲ್ಲಿ ಕೊಟ್ಟಿದ್ದು ವಿಶೇಷ ಕೊಡುಗೆಯಾಗಿದೆ. ವಾಗ್ದೇವಿ ಬಿ ಪಾಟೀಲ, ಚಂದ್ರಕಾಂತ ಕರದಳ್ಳಿ, ಡಾ ರಂಗರಾಜ ವನದುರ್ಗ, ಸಿದ್ಧರಾಮ ಹೊನ್ಕಲ್, ಲಿಂಗಣ್ಣ ಸತ್ಯಂಪೇಟೆ, ಡಾ ಗಂಗಮ್ಮ ಸತ್ಯಂಪೇಟೆ, ಸೂಗಯ್ಯ ಹಿರೇಮಠ ಇವುರುಗಳು ತಮ್ಮದೇ ಆದ ನಿಲುವಿನಲ್ಲಿ ಕಾದಂಬರಿ ರಚಿಸಿದ್ದಾರೆ. ಹೆಣ್ಣಿನ ತುಡಿತ, ಒಳನೋಟ, ಸಾಜಿಕ ಪ್ರಜ್ಞೆ, ಜನ ಸಾಮಾನ್ಯರ ಬದುಕು, ಶರಣರ ಚರಿತ್ರೆ, ಒಡಹುಟ್ಟಿದವರು ಚರಿತ್ರೆಗಳನ್ನು ಕೊಟ್ಟ ಕೀರ್ತಿ ಯಾದಗಿರಿ ಜಿಲ್ಲೆಗೆ ಸಲ್ಲುತ್ತದೆ.

ಡಾ ಸುರೇಂದ್ರ ಕೆರಮಗಿಯವರು ಹೈದ್ರಾಬಾದ್ ಕರ್ನಾಟಕದ ಪ್ರಮುಖ ಕಾದಂಬರಿಕಾರರು ಎಂಬ ಹೊತ್ತಿಗೆ ಕಾದಂಬರಿಕಾರರ ಜೀವನ, ಸಾಹಿತ್ಯ, ಕಾಲ, ವಿಷಯ ವಸ್ತು, ತಂತ್ರ, ಭಾಷೆ, ಇವುಗಳ ಕುರಿತು ಬೆಳಕು ಚೆಲ್ಲುತ್ತದೆ. ಇದು ಮುಂದಿ ಸಂಶೋಧಕರಿಗೆ ದಿಕ್ಸೂಚಿಯಾಗಿದೆ.

**ಸಾಂರ್ಭಿಕ ಗ್ರಂಥಗಳು**

1. ಹೈದ್ರಾಬಾದ್ ಕರ್ನಾಟಕದ ಪ್ರಮುಖ ಕಾದಂಬರಿಕಾರರು : ಡಾ.ಸುರೇಂದ್ರಕುಮಾರ ಕೆರಮಗಿ
2. ಕಲ್ಯಾಣ ಕರ್ನಾಟಕದ ಕಾದಂಬರಿಗಳು : ಡಾ.ಕಾವ್ಯಶ್ರೀ ಜಿ
3. ಹೊಸಗನ್ನಡದ ಅರುಣೋದಯ : ಡಾ.ಶ್ರೀನಿವಾಸ ಹಾವನೂರು